ಎಲ್‌ಎಸ್ಡಿ ಟ್ರಿಪ್ ಹೊಡೆಯುತ್ತಾರೆ' ಎಂದು ನನಗೆ ಪರಿಚಯ ಮಾಡಿಕೊಟ್ಟಿದ್ದರು. 'ನಿಮ್ಮಂಥವರ ಭೇಟಿ ಖಂಡಿತವಾಗಿಯೂ ಅಪರೂಪದ ಸಂಗತಿ' ಎಂದು ಕೈಮುಗಿದಿದ್ದೆ. 'ಇವರು ಬೆಂಗಳೂರಿನಿಂದ ಬಂದಿದ್ದಾರೆ, ಅದೇ ನಮ್ಮ ಫ್ರೆಂಡ್ ಕಾಕಿಗಡ್ಡ ರಾಘವರೆಡ್ಡಿ ಇದಾರಲ್ಲ, ಅವರ ಆತ್ಮೀಯರು. ಹಾಗಾಗಿ ನಮಗೂ ಹತ್ತಿರದ ಸ್ನೇಹಿತರೇ' ಎಂದು ನನ್ನ ಪರಿಚಯ ಮಾಡಿಕೊಟ್ಟಿದ್ದರು. ಭಗವಾನ್ ಕುಟ್ಟಿ ಮಧ್ಯದಲ್ಲಿ ಬಾಯಿ ಹಾಕಿ ನಗುತ್ತಾ 'ಕನ್ಯಾಕುಮಾರಿಗೆ ಎಲ್‌ಎಸ್ಡಿ ಟ್ರಿಪ್ ಹೋಗಲು ತಾವು ಬಂದ ದಿನವೇ ಹೇಳಿದ್ದೆನಲ್ಲ ಸಾಹೇಬರೇ, ಇವರ ಹತ್ತಿರವೇ ಹೋಗಲು ಪ್ಲಾನ್ ಇದ್ದದ್ದು. ನೋಡಿ ಅವರೇ ಇಲ್ಲಿಗೆ ಬಂದಿದ್ದಾರೆ' ಎಂದ ಭಗವಾನ್ ಕುಟ್ಟಿ, ಕಿಚನ್‌ಗೆ ಹೋಗಿ ಅವರಿಬ್ಬರಿಗೂ ಊಟ ತಂದಿದ್ದ.

'ಇನ್ನು ಐವತ್ತು ವರ್ಷಗಳ ಕಾಲ ಇಂಥ ಮಳೆ, ಪ್ರವಾಹ ಈ ದೇವರ ನಾಡಿಗೆ ಕಾಲಿಡುವುದಿಲ್ಲ ನಯ್ಯಾರ್, ಬೇಕಾದರೆ ಬರೆದಿಟ್ಟುಕೊ. ಈ ವರ್ಷ ಮತ್ತೆ ನಮ್ಮ ನಾಡು ಜಲಕಂಟಕಕ್ಕೆ ತುತ್ತಾಗುತ್ತದೆಂದು ನಾನು ಹೋದ ವರ್ಷ ಪ್ರವಾಹ ಬಂದಿದ್ದಾಗಲೇ ಹೇಳಿದ್ದೆ. ವಾರದ ಹಿಂದೆ ಹವಾಮಾನ ಇಲಾಖೆಯವರಿಗೂ ಫೋನ್ ಮಾಡಿ ತಿಳಿಸಿದ್ದೆ. ನನ್ನ ಮಾತು ಕೇಳಿ ಯಾವೋನೋ ಫೋನ್ ರಿಸೀವ್ ಮಾಡಿದವನು ನಕ್ಕು ಉಡಾಫೆ ಮಾತುಗಳನ್ನಾಡಿದ್ದ. ನಿನ್ನೆಯಿಂದ ನೋಡಿದರೆ, ಗಂಟೆಗೊಮ್ಮೊಮ್ಮೆ ಫೋನ್ ಮಾಡುತ್ತಲೇ ಇದ್ದಾರೆ. ನಾನು ಹೇಳಿದ್ದನ್ನೇ ಹವಾಮಾನ ಮುನ್ಸೂಚನೆ ಬುಲೆಟಿನ್‌ನಲ್ಲಿ ಪ್ರಸಾರ ಮಾಡುತ್ತಿದ್ದಾರೆ' ಎಂದು ಊಟ ಮಾಡಲು ಪ್ರಾರಂಭಿಸಿದ್ದರು.

ಭಾಗ–10

ಊಟ ಮುಗಿಸಿಕೊಂಡು ನಾನು ನನ್ನ ಕೊಠಡಿಗೆ ಹೋಗಿದ್ದೆ. ಕೆ.ಎಮ್. ನಯ್ಯಾರರ ಮನೆಯಲ್ಲಿ ಆಶ್ರಯ ಪಡೆದುಕೊಂಡಿದ್ದವರ ಗಜಿಬಿಜಿ ಗಲಾಟೆ ಇನ್ನೂ ನಡೆಯುತ್ತಲೇ ಇತ್ತು. ಭಗವಾನ್ ಕುಟ್ಟಿ ಅಲ್ಲಿದ್ದವರಿಗೆಲ್ಲರಿಗೂ ಡ್ರಿಂಕ್ಸ್ ಮತ್ತು ನಾನ್‌ವೆಜ್ ಊಟ ಅರೇಂಜ್ ಮಾಡಿದ್ದಿರಬೇಕು, ಸುಮಾರು ಜನ ಭಗವಾನ್ ಕುಟ್ಟಿಯ ಧಾರಾಳತನವನ್ನು ಕೊಂಡಾಡುತ್ತಿದ್ದರು. ಅಚ್ಯುತನ್ ನಂಬಿಯಾರರ ಮಾತುಗಳು ನನ್ನಲ್ಲಿ ಅಚ್ಚರಿಯನ್ನು ಮೂಡಿಸಿದ್ದವು. ಮುಂದೆ ನಡೆಯುವ ಸಂಗತಿಗಳ ಬಗ್ಗೆ ಕೆಲವರು ಕರಾರುವಕ್ಕಾಗಿ ಹೇಗೆ ಹೇಳಬಲ್ಲರು? ವಿಜ್ಞಾನ ಸಾಕಷ್ಟು ಅಭಿವೃದ್ಧಿ ಹೊಂದದ ಹಿಂದಿನ ಕಾಲದಲ್ಲಿ ಸೂರ್ಯ, ಚಂದ್ರಗ್ರಹಣಗಳ ನಿಖರವಾದ ದಿನ ಮತ್ತು ಗಳಿಗೆಗಳನ್ನು ಪಂಚಾಂಗಗಳಲ್ಲಿ ಪುರಾತನರು ಹೇಗೆ ದಾಖಲಿಸುತ್ತಿದ್ದರು? ಸೌರವ್ಯೂಹದಲ್ಲಿನ ಗ್ರಹಗಳು ಭೂಮಂಡಲದಲ್ಲಿನ ಪ್ರಕೃತಿ ಮತ್ತು ಜನರ ಮೇಲೆ ಬೀರುತ್ತಿದ್ದ ಪರಿಣಾಮಗಳನ್ನು ಹೇಗೆ ಗ್ರಹಿಸುತ್ತಿದ್ದರು? ಛೇ, ಬೇಡವಾದ ವಿಚಾರಗಳು ಮನಸ್ಸನ್ನು ಕೊರೆಯುತ್ತಿದ್ದವು. ಅವುಗಳಿಂದ ತಪ್ಪಿಸಿಕೊಳ್ಳಲು ಕಾಕಿಗಡ್ಡ ರಾಘವರೆಡ್ಡಿಗೆ ಫೋನ್ ಮಾಡಿದ್ದೆ.

'ಓಹ್, ಕಡೆಗೂ ಫೋನ್ ಮಾಡ್ದಲ್ಲ. ಇನ್ನರ್ಧ ಗಂಟೆ ನೋಡಿ ನಾನೇ ಮಾಡ್ತಿದ್ದೆ. ನ್ಯೂಸ್ ನೋಡ್ತಾ ಇದ್ದೀನಿ. ಮಳೆ ಪ್ರವಾಹ ಕಡಿಮೆ ಆಗಿದ್ರೂ ಅವು ಮಾಡಿದ ರಾಡಿ ಮಾತ್ರ ಭಯಂಕರವಾಗಿದೆ. ಎಲ್ಲೆಂದರಲ್ಲೇ ತೇಲುತ್ತಿರುವ ಮನುಷ್ಯರ, ಪ್ರಾಣಿಗಳ ಹೆಣಗಳು, ಕೆಸರು ತುಂಬಿಕೊಂಡ ಮನೆಗಳು, ಬೀದಿಗೆ ಬಿದ್ದ ಆಹಾರ ಧಾನ್ಯಗಳು, ಊಟ ನೀರಿಗಾಗಿ ಬಾಯ್ಬಿಟ್ಟುಕೊಂಡು ಮರ, ಮನೆ ಮಾಳಿಗೆಗಳ ಮೇಲೆ ನಡುಗುತ್ತಾ ಕುಳಿತಿರುವ ಮಕ್ಕಳು, ಮುದುಕರನ್ನು ನೋಡುತ್ತಿದ್ದರೆ ಹೊಟ್ಟೆಯಲ್ಲಿ ಬೆಂಕಿ ಬಿದ್ದಷ್ಟೆ ಸಂಕಟವಾಗುತ್ತದೆ. ಇಂಥ ಸಮಯದಲ್ಲೇ ಮನುಷ್ಯ ತನ್ನ ಸ್ವಾರ್ಥವನ್ನು ಬಿಟ್ಟು ಮಾನವೀಯತೆಯನ್ನು ಪ್ರಕಟಿಸಬೇಕಾಗಿದೆ. ಇಂಥ ವಿಷಯದಲ್ಲಿ ಕೆ.ಎಮ್. ನಯ್ಯಾರ್ ತುಂಬಾ ಹೃದಯವಂತ. ಆದ್ದರಿಂದಲೇ ಅವರಲ್ಲಿ ಕೆಲಸ ಮಾಡುವ ಸಾವಿರಾರು ಜನ ಕಾರ್ಮಿಕರಲ್ಲಿ ಇವೊತ್ತಿಗೂ ಅವರ ವಿರುದ್ಧ ಒಬ್ಬರೇ ಒಬ್ಬರು ಕೂಡಾ ಅಸಮಾಧಾನಗೊಂಡಿಲ್ಲ. ಅದು ಸರಿ, ಊಟ ಆಯ್ತಾ? ಏನು ಮಾಡ್ತಿದ್ದೀಯಾ' ಒಂದೇ ಸಮನೆ ಮಳೆ ಸುರಿದಂತೆ ಮಾತನಾಡಿದ್ದ. 'ಜಸ್ಟ್ ನಯ್ಯಾರ್ ಜೊತೆ ಊಟ ಮುಗಿಸಿ ನನ್ನ ರೂಮಿಗೆ ಬಂದೆ. ನಯ್ಯಾರರೊಂದಿಗೆ ನಾಳೆಯೂ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ಕೊಡುವ ಪ್ರೋಗ್ರಾಂ ಇದೆ. ನೀನು ಹೇಳುವಂತೆ ನಯ್ಯಾರರದ್ದು ತುಂಬಾನೇ ವಿಚಿತ್ರವಾದ ಕ್ಯಾರೆಕ್ಟರ್. ಒಂದು ರೀತಿ ಅಳತೆಗೆ ನಿಲುಕದ ವ್ಯಕ್ತಿತ್ವ. ಮತ್ತೆ ಪ್ರವಾಹ ಭೀತಿ ಇಲ್ಲವೆಂದು ಹವಾಮಾನ ಇಲಾಖೆ ಹೇಳಿದೆ. ಹಾಗಾಗಿ ಅಂಥ ಭಯಪಡುವ ಅಗತ್ಯವೇನೂ ಇಲ್ಲವೆನಿಸುತ್ತದೆ. ಮತ್ತೆ ನಿನ್ನ ಕಥೆಯೇನು?' ಎಂದಿದ್ದೆ.

'ನಾನು ಸಂಜೆ ಏಳುಗಂಟೆಗೆ ಬೆಂಗಳೂರಿನಿಂದ ದೆಹಲಿಗೆ ಬಂದೆ. ನಮ್ಮ ಎಂಪಿ ಮನೆಯಲ್ಲಿ ಉಳ್ಕೊಂಡಿದ್ದೀನಿ. ಆಂಧ್ರಭವನದಲ್ಲಿ ನನ್ನ ಸ್ನೇಹಿತ ಎಂಎಲ್‌ಎ ಕೊಂಡಯ್ಯನೊಂದಿಗೆ ಗ್ಲೆನ್ಫಿಡಿಚ್ ವಿಸ್ಕಿ ಕುಡೀತಿದ್ದೀನಿ. ಅರವತ್ತು ವರ್ಷಗಳ ಹಿಂದೆ ಉತ್ಪಾದನೆ ಮಾಡಿದ್ದಂತೆ ಈ ವಿಸ್ಕಿಯನ್ನು. ಅಂದರೆ ನನಗಿಂತಲೂ ವಯಸ್ಸಿನಲ್ಲಿ ಸಿಕ್ಕಾಪಟ್ಟೆ ದೊಡ್ಡದು. ಒಂದೊಂದು ತೊಟ್ಟು ನಾಲಿಗೆಯ ಮೇಲೆ ಬಿದ್ದಾಗಲೂ ಒಂದೊಂದು ಮಂಕರಿ ರೋಮಾಂಚನವನ್ನು ತುಂಬಿಕೊಂಡಂತಾಗುತ್ತದೆ. ಅದರ ಜೊತೆಗೆ ಆಂಧ್ರಭವನದ ಚಿಲ್ಲಿ ಚಿಕನ್, ಮಟನ್ ಚಾಪ್ಸ್, ಫಿಶ್ ಫ್ರೈ ಪ್ರಪಂಚವನ್ನು ಮರೆಸುತ್ತಿವೆ. ಆದರೂ ನಿಮ್ಮ ರಾಜ್ಯದ ಎಕ್ಸ್ ಫವರ್ ಮಿನಿಸ್ಟರ್ ರಾಮ್ ಗೋಪಾಲ್‌ನಿಂದಾಗಿ ನನ್ನ ನಿದ್ದೆಗೆಟ್ಟಿದೆ. ದೆಹಲಿಯ ಸಿಬಿಐ ಕಚೇರಿಯಿಂದ ನಿಮ್ಮ ರಾಜ್ಯದ ಎಕ್ಸ್ ಪವರ್ ಮಿನಿಸ್ಟರ್ ರಾಮ್ ಗೋಪಾಲ್‌ಗೆ ತುರ್ತಾಗಿ ಹಾಜರಾಗಲು ನೋಟಿಸ್ ನೀಡಲಾಗಿದೆಯಂತೆ. ಎನ್‌ಫೋರ್ಸ್‌ಮೆಂಟ್ ಡಿಪಾರ್ಟ್‌ಮೆಂಟ್‌ನವರು ಕೂಡಾ ಆತನಿಗೆ ಕಾಯುತ್ತಿದ್ದಾರಂತೆ. ಸಿಬಿಐನವರು ಸರಿಯಾಗಿಯೇ ಗ್ರಿಲ್ ಮಾಡಿದರು ಅಂದ್ರೆ ನಿಜವನ್ನು ಕರುಳಿನೊಳಗಿಂದ ಕಕ್ಕಿಬಿಡ್ತಾನೆ. ಹಾಗೆ ಕಕ್ಕಿದಾಗ ನನ್ನ ಬ್ರದರ್ ಹೆಸರೇನಾದರೂ ಉದುರಿಬಿಟ್ರೆ ಏನು ಮಾಡೋದು ಅನ್ನೋ ಭಯ. ಆದರೆ ಯಾವ ದಾಖಲೆಗಳಲ್ಲೂ ನಮ್ಮ ಬ್ರದರ್ ಹೆಸರು ಇಲ್ಲ ಅನ್ನೋದು ಕನ್ಫರ್ಮ್ ಆಗಿದೆ. ಮಿತಿಮೀರಿ ಅಂಥ ತೊಂದರೆ ಬಂದರೆ ನೀನು ಇದ್ದೇ ಇದ್ದೀಯಲ್ಲ. ಕೆ.ಎಮ್. ನಯ್ಯಾರರಿಗೆ ಮಧ್ಯಾಹ್ನದಿಂದ ಮೂರು ಸಾರಿ ಫೋನ್ ಮಾಡಿದ್ದೆ. ರಿಂಗಾದರೂ ರಿಸೀವ್ ಮಾಡಿಕೊಳ್ತಾ ಇಲ್ಲ. ನಿಂದಂತೂ ಬರಿ ನಾಟ್ ರೀಚಬಲ್' ಎಂದ ರಾಘವರೆಡ್ಡಿಗೆ, 'ಈಗ ತಾನೇ ಊಟ ಮುಗಿಸಿದ್ದಾರೆ. ಯಾರೋ ಅಚ್ಯುತನ್ ನಂಬಿಯಾರ್ ಅಂತೆ, ಕನ್ಯಾಕುಮಾರಿಯಿಂದ ಬಂದಿದ್ದಾರೆ. ಅವರ ಜೊತೆ ಮಾತನಾಡುತ್ತಿದ್ದಾರೆ. ಭಗವಾನ್ ಕುಟ್ಟಿ ಕೂಡಾ ಜೊತೆಯಲ್ಲಿದ್ದಾನೆ' ಎಂದೆ. ನನ್ನ ಮಾತುಗಳನ್ನು ಮಧ್ಯದಲ್ಲೇ ತುಂಡರಿಸಿದ ರಾಘವರೆಡ್ಡಿ, 'ಓಹ್, ಆತನನ್ನು ನಾನೂ ಭೇಟಿಯಾಗಿದ್ದೇನೆ. ಒಳ್ಳೆ ಇಂಟರೆಸ್ಟಿಂಗ್ ಪರ್ಸನಾಲಿಟಿ. ಕನ್ಯಾಕುಮಾರಿಯ ಅವರ ಮನೆಗೆ ಮಾಧವನ್ ಪಿಳ್ಳೈ ಜೊತೆ ನಾನೂ ಒಂದು ಸಾರಿ ಹೋಗಿದ್ದೀನಿ. ಪೂರಾ ಒಂದು ದಿನ ಕಾಲ ಕಳೆದು ಬಂದಿದ್ದೀನಿ. ಎಲ್‌ಎಸ್ಡಿ ಎಕ್ಸ್‌ಪರ್ಟ್. ಅದೊಂದೇ ಅಲ್ಲ, ಮಂಡಲ ಪಂಚಾಯ್ತಿ ಎಲೆಕ್ಷನ್ನಿಂದ ಹಿಡಿದು ಇಂಟರ್ ನ್ಯಾಷನಲ್ ಪೊಲಿಟಿಕ್ಸ್ ತನಕ ಅದ್ಭುತ ನಾಲೆಡ್ಜ್ ಇದೆ. ಅಷ್ಟೇ ಅಲ್ಲ, ಹಿಸ್ಟರಿಯಿಂದ ಹಿಡಿದು ಕೆಮಿಸ್ಟ್ರಿತನಕವೂ ಸಖತ್ತಾಗಿ ಓದಿಕೊಂಡಿದ್ದಾನೆ. ಹೊರಗೆ ಮಹಾನ್ ಧೈರ್ಯವಂತನಂತೆ ಕಂಡರೂ ಒಳಗೆ ವಿಪರೀತ ಪುಕ್ಕಲ ಆಸಾಮಿ. ಮಾಧವನ್ ಪಿಳ್ಳೈಗಂತೂ ತುಂಬಾ ಕ್ಲೋಸಾಗಿದ್ದ ಆಸಾಮಿ. ನಾಳೆ ನಾನು ಸ್ವಲ್ಪ ಬಿಜಿ. ಅದೇ ಎಂಎಲ್‌ಎ, ನಮ್ಮ ಕೊಂಡಯ್ಯ ಫ್ಯಾಮಿಲಿ ಪ್ರಾಬ್ಲಂನಲ್ಲಿ ಸಿಗಾಕ್ಕೊಂಡಿದ್ದಾನೆ. ದೆಹಲಿಯಲ್ಲಿ ಅವನು ಯಾರೋ ಆಂಟೀನ ಮೈಂಟೇನ್ ಮಾಡ್ತಿದ್ದ. ಅದ್ಭುತ ಪರ್ಸನಾಲಿಟಿ. ಅದು ಹೇಗೋ ಅವನ ಹೆಂಡ್ತಿಗೆ ಗೊತ್ತಾಗಿ ನಾಳೆ ಬೆಳಿಗ್ಗೆ ಫ್ಲೈಟಿಗೆ ಬರ್ತಿದ್ದಾಳೆ. ಕೊಂಡಯ್ಯನ ಮಾವ ನಮಗೆ ಹತ್ತಿರದ ಸಂಬಂಧಿ. ಪ್ರಪಂಚದಲ್ಲಿ ಎಲ್ಲಿ ನೋಡಿದ್ರೂ ಈ ದೇಹಗಳದ್ದು ಬರಿ ಹೊಲಸಾಟಗಳು. ನಾಳೆ ಪೂರ್ತಿ ಅದೊಂದು ಪಂಚಾಯ್ತಿ ಆಗಬಹುದು. ನಾಳೆ ರಾತ್ರಿಗೆ ನಾನೇ ಫೋನ್ ಮಾಡ್ತೀನಿ' ಎಂದು ಫೋನ್ ಇಟ್ಟಿದ್ದ.

ರಾಘವರೆಡ್ಡಿಯ ಜೊತೆ ಮಾತನಾಡಿ ಫೋನನ್ನು ಹಾಸಿಗೆಯ ಮೇಲೆ ಹಾಕಿ ರೆಸ್ಟ್ ರೂಮಿಗೆ ಹೋಗಿ ಬರುವಷ್ಟರಲ್ಲಿ ಭಗವಾನ್ ಕುಟ್ಟಿ ಸೋಫಾದ ಮೇಲೆ ಕುಳಿತುಕೊಂಡಿದ್ದ. 'ಏನು ನಿದ್ದೆ ಬರಲಿಲ್ಲವೆ? ನಾಳೆ ಎಷ್ಟೊತ್ತಿಗೆ ಮನೆ ಬಿಡುವುದೆಂದು ನಯ್ಯಾರರನ್ನು ಕೇಳಬೇಕೆಂದಿದ್ದೆ, ಆದರೆ ಎದ್ದು ಬರುವಾಗ ಮರೆತು ಬಂದುಬಿಟ್ಟೆ' ಎಂದು ಭಗವಾನ್ ಕುಟ್ಟಿಗೆ ನಯ್ಯಾರರ ಅತ್ಯಂತ ವೈಯಕ್ತಿಕ ಸಂಗತಿಗಳು ಮತ್ತು ತೀರ್ಮಾನಗಳು ತಿಳಿದಿರುತ್ತವೆಂದೇ ಹಾಗೆ ಹೇಳಿದ್ದೆ. 'ನಮ್ಮ ನಯ್ಯಾರ್ ಯಾವೊತ್ತೂ, ಎಂಥ ಪ್ರಮುಖ ಕಾರ್ಯಕ್ರಮಗಳಿಗೂ ಬೆಳಿಗ್ಗೆ ಎಂಟು ಗಂಟೆಯೊಳಗೆ ಮನೆಯನ್ನು ಬಿಟ್ಟವರೇ ಅಲ್ಲ. ಬೆಳಗಿನ ನಿದ್ದೆಗೆ ಅವರೆಂದೂ ಭಂಗ ತಂದುಕೊಳ್ಳುವುದಿಲ್ಲ. ರಾತ್ರಿ ಎಷ್ಟು ಹೊತ್ತಾದರೂ ನಿದ್ದೆ ತಡೆಯಬಲ್ಲರು, ಆದರೆ ಬೆಳಿಗ್ಗೆ ಏಳು ಗಂಟೆಯ ಮೇಲೆಯೇ ಹಾಸಿಗೆಯಿಂದ ಏಳುವುದು. ಅಚ್ಯುತನ್ ನಂಬಿಯಾರ್ ಬೇರೆ ಬಂದಿದ್ದಾನಲ್ಲ, ಇನ್ನು ಮಲಗಲಿಕ್ಕೆ ಹನ್ನೆರಡೂವರೆ ಗಂಟೆ ಮೇಲೆಯೇ ಆಗುವುದು. ಅಂದಹಾಗೆ ಆ ಅಚ್ಯುತನ್ ನಂಬಿಯಾರನ್ನ ನೋಡಿದರೆ ನಿಮಗೆ